**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ:ರವರ ನ್ಯಾಯಾಲಯದಲ್ಲಿ,**
**ನ.ರಾ.ಪುರ.**
**ಸಿ.ಸಿ. ನಂ :90/2025**

| | | |
|---|---|---|
| ಸಾಕ್ಷಿದಾರರ ಹೆಸರು | : ಭರತ್ ಬಿ ವೈ | ಸಿ.ಡಬ್ಲ್ಯು - 01 |
| ತಂದೆಯ ಹೆಸರು | : ಯತಿರಾಜ್ ಬಿ ವಿ | ಪಿ.ಡಬ್ಲ್ಯು - 01 |
| ವಯಸ್ಸು | : 38 ವರ್ಷ | |
| ಉದ್ಯೋಗ | : ವ್ಯವಸಾಯ | |
| ವಾಸಸ್ಥಳ | : ಶಿವಮೊಗ್ಗ | |

ದಿನಾಂಕ: **23/02/2026** ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಮಾನ್ಯ ಎಪಿಪಿ ಯವರಿಂದ ::

ಚಾಸಾ 2 ರವರ ಪರಿಚಯ ಇರುತ್ತದೆ. ಚಾಸಾ 27 ನನ್ನ ತಂದೆ ಇರುತ್ತಾರೆ. ಚಾಸಾ 31 ಮತ್ತು 32 ನನ್ನ ಮಾವಂದಿರು, ಚಾಸಾ 33 ರವರು ನನ್ನ ಅಣ್ಣ ಇರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇರುತ್ತದೆ.

2. ನಮ್ಮ ತಂದೆ ಎನ್ ಆರ್ ಪುರ ತಾಲ್ಲೂಕು ಕುಸ್ಕೋಲ್ ಗ್ರಾಮದ ಸರ್ವೆ ನಂ: 27, 28, 10 ಮತ್ತು 16 ರಲ್ಲಿ ಸುಮಾರು 8 ಎಕರೆ ಜಮೀನನ್ನು ಖರೀದಿ ಮಾಡಿದ್ದರು. ನಮ್ಮ ಜಮೀನಿನ ಪಕ್ಕದಲ್ಲಿ ರಘುಚಂದ್ರ (2 ನೇ ಆರೋಪಿಯ ತಂದೆ) ಇವರ ಜಮೀನು ಮತ್ತು ಮನೆ ಇದ್ದು, ನಮಗೆ ಗಾಜನೂರಿನಲ್ಲಿ ಜಮೀನು ಇದ್ದು, ಅಲ್ಲಿಂದ ಬಂದು ಇಲ್ಲಿಯ ಜಮೀನನ್ನು ನಾನೇ ನೋಡಿಕೊಳ್ಳುತ್ತಿದ್ದು, ಆವಾಗ ನನಗೆ 2 ನೇ ಆರೋಪಿಯ ಪರಿಚಯ ಆಗಿದ್ದು, ಸೆಪ್ಟೆಂಬರ್ 2016 ರ ಕೊನೆಯ ವಾರದಲ್ಲಿ ನಂದನ್ ರವರು ತಮ್ಮ ಮನೆಗೆ ಔತಣ ಕೂಟಕ್ಕೆ ಕರೆದಿದ್ದರು. ಆವಾಗ ಸದರಿ ನಂದನ್ ರವರು ರೈಸ್ ಪುಲ್ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದು, ನನಗೆ ಆ ವ್ಯವಹಾರದ ಬಗ್ಗೆ ಮಾಹಿತಿ ಇಲ್ಲದೇ ಇದ್ದು, ನಂದನ್ ರವರು ರೈಸ್ ಪುಲ್ ವಸ್ತುವಿನಿಂದ ಒಂದು ಇಂಚಿಗೆ ನೂರಾರು ಕೋಟಿ ಬೆಲೆ ಬಾಳುತ್ತದೆ ಆ ಬಗ್ಗೆ ಮಠದ ಸ್ವಾಮಿಜಿ ರವರಿಗೆ ಗೊತ್ತಿರುತ್ತದೆ ಎಂದು ಹೇಳಿದರು. ನಾವು ಅವರ ಜೊತೆ ವ್ಯವಹಾರ ಮಾಡಿದರೇ ಕೋಟ್ಯಾಂತರ ರೂಪಾಯಿ ಲಾಭ ಬರುತ್ತದೆ ಎಂದು ಹೇಳಿದರು. ನಂತರ ಅವರು ಸ್ವಾಮಿಜೀ ರವರನ್ನು ಬೇಟಿಯಾಗೋಣ ಎಂದು ನನ್ನನ್ನು ಕರೆದರು. ನನಗೆ ಸದರಿ ವ್ಯವಹಾರದ ಬಗ್ಗೆ ಗೊತ್ತಿಲ್ಲದ ಕಾರಣ ನನ್ನ ಸ್ನೇಹಿತ ಇಂತಿಯಾಜ್(ಚಾಸಾ 2 ) ರವರು ನನಗೆ ಚಿಕ್ಕವನಿಂದ ಪರಿಚಯ ಇದ್ದು, ಅವನು ನಮ್ಮ ಮನೆಗೆ ಬರುವುದು ಹೋಗುವುದು ಮಾಡುತ್ತಿದ್ದನು.

3. ನಾನು ಇಂತಿಯಾಜ್ ಬಳಿ ರೈಸ್ ಪುಲ್ ವ್ಯವಹಾರದ ಬಗ್ಗೆ ಕೇಳಿದ್ದು ಆತನು ರೈಸ್ ಪುಲ್ ವ್ಯವಹಾರ ಮಾಡಿದರೆ ಸಾಕಷ್ಟು ಹಣ ಬರುತ್ತದೆ ಎಂದು ತಾವು ಕೇಳಿರುವುದಾಗಿ ಹೇಳಿದನು. ನಂತರ ಒಂದು ವಾರದ ನಂತರ 2 ನೇ ಆರೋಪಿ ಹಾಸನದ ವಿಜಯಕುಮಾರ್ (3 ನೇ ಆರೋಪಿ) ಎನ್ ಆರ್ ಪುರದಲ್ಲಿ ಕ್ಯಾಂಪ್ ಮಾಡಿದ್ದಾನೆ, ಅವನನ್ನು ಬೇಟಿಯಾಗೋಣ ಎಂದು ಅಕ್ಟೋಬರ್ 2016 ರ ಮೊದಲನೆ ವಾರದಲ್ಲಿ ಕರೆದುಕೊಂಡು ಹೋಗಿ ಅವರನ್ನು ಎನ್ ಆರ್ ಪುರದ ಬಸ್ತಿ ಮಠದ ಬಳಿ ವಿಜಯಕುಮಾರ್ ರವರನ್ನು ಪರಿಚಯ ಮಾಡಿಸಿದರು. ಸದರಿಯವರು ತಮಗೆ ರೈಸ್ ಪುಲ್ ಬಗ್ಗೆ ಗೊತ್ತಿರುತ್ತದೆ ಹಾಗೂ ತಮ್ಮ ಸಮಕ್ಷಮ ಸ್ವಾಮಿಜೀ ರವರಿಗೆ ಪೋನ್ ಮಾಡಿ ಅವರನ್ನು ಬೇಟಿಯಾಗುವುದಾಗಿ ಹೇಳಿದ್ದು, ನಂತರ 3 ದಿನಗಳು ಆದ ಮೇಲೆ ಹೊಸದುರ್ಗಕ್ಕೆ ಹೋದಾಗ ಸ್ವಾಮಿಗಳು ಸಿಗದೇ ಇದ್ದು ಆಗ 2 ಮತ್ತು 3 ನೇ ಆರೋಪಿತರು ಸ್ವಾಮಿಜೀ ರವರಿಗೆ ಪೋನ್ ಮಾಡಿ ಸ್ವಾಮಿಜೀ ರವರನ್ನು ಬೇಟಿಯಾಗುವ ಬಗ್ಗೆ ಕೇಳಿದಾಗ ಅವರು ನಾನು ತುಂಬಾ ದೂರ ಇದ್ದೇನೆ ನೀವು ಬೇಟಿಯಾಗಲು ಆಗುವುದಿಲ್ಲ ಸದ್ಗುರು ಸೇವಾಶ್ರಮಕ್ಕೆ ಹೊಗಿ ಸಣ್ಣ ಸ್ವಾಮಿಜೀ ರವರನ್ನು ಅಲ್ಲಿಗೆ ಕಳುಹಿಸುತ್ತೇನೆ, ಬೇಟಿಯಾಗಿ ಎಂದು ಹೇಳಿದರು. ನಂತರ ನಾನು, ಚಾಸಾ 2, 2 ಮತ್ತು 3 ನೇ ಆರೋಪಿತರು ಸದ್ಗುರು ಸೇವಾಶ್ರಮಕ್ಕೆ ಹೋದೆವು.

4. ನಾವು ಸದರಿ ಆಶ್ರಮಕ್ಕೆ ಹೋದಾಗ 40 ವರ್ಷದ ಕಾವಿ ಧರಿಸಿದ ಒಬ್ಬ ಸ್ವಾಮಿಜೀ ಇದ್ದು, ಅವರು ನಮ್ಮ ಬಳಿ ಬಂದು ರೈಸ್ ಪುಲ್ ವ್ಯವಹಾರದ ಬಗ್ಗೆ ಮಾತನಾಡಿದರು. ಸದರಿ ರೈಸ್ ಪುಲ್ ವ್ಯವಹಾರ ಮಾಡುವ ಬಗ್ಗೆ ನಿಮ್ಮ ಜೊತೆ ಮಾಡುವ ಸಂಬಂದ ದೇವರ ಅಪ್ಪಣೆಯಾಗಬೇಕು ಅದಕ್ಕೆ ನಿಮ್ಮ ಜಾತಕ , ವಿಳಾಸ ಮತ್ತು ಮೊಬೈಲ್ ನಂಬರನ್ನು ಕೊಟ್ಟು ಹೋಗಿ ಎಂದು ಹೇಳಿದರು. ನಂತರ ದೇವರ ಅಪ್ಪಣೆ ಕೇಳಿ ಸದರಿ ವ್ಯವಹಾರ ನಿಮ್ಮ ಜೊತೆಗೆ ಮಾಡಲು ಆಗುತ್ತದೆಯೋ, ಇಲ್ಲವೋ ಎಂಬ ಬಗ್ಗೆ ತಿಳಿಸುತ್ತೇವೆ ಎಂದು ಹೇಳಿದರು. ನಂತರ ನಾವು ಊರಿಗೆ ವಾಪಾಸ್ಸು ಬಂದಿರುತ್ತೇವೆ. ಮಾರನೇ ದಿನ 3 ನೇ ಆರೋಪಿ ನನಗೆ ಪೋನ್ ಮಾಡಿ ಸ್ವಾಮಿಜೀ ರವರು ಪೋನ್ ಮಾಡಿ ಈ ವ್ಯವಹಾರ ಮಾಡಲು ನಿಮಗೆ ಅಪ್ಪಣೆಯಾಗಿದೆ, ನೀವು ತಕ್ಷಣ ಹೊರಟು ಬನ್ನಿ ಸ್ವಾಮಿಜೀ ರವರನ್ನು ಬೇಟಿಯಾಗಬೇಕು ಎಂದು ತಿಳಿಸಿದರು.

5. ನಂತರ 2-3 ದಿನಗಳು ಆದ ಮೇಲೆ ನಾನು ಮತ್ತು ಚಾಸಾ 2 ರವರು ಹೊಸದುರ್ಗಕ್ಕೆ ಸ್ವಾಮಿಜೀ ರವರನ್ನು ಬೇಟಿ ಮಾಡಲು ಹೋಗಿದ್ದು ಆ ಕಾಲಕ್ಕೆ 2 ಮತ್ತು 3 ನೇ ಆರೋಪಿತರು ಅಲ್ಲಿಗೆ ಬಂದಿದ್ದರು. ಸದರಿಯವರು ಸ್ವಾಮಿಜೀ ರವರನ್ನು ಬೇಟಿಯಾಗುವ ಪೂರ್ವದಲ್ಲಿ ನಾವು

2-3 ಕಂಪನಿರವರನ್ನು ಬೇಟಿ ಮಾಡಿ ವಿಚಾರಿಸಿದ್ದು ಅವರು 40-45 ಲಕ್ಷ ರೂ. ಕಂಪನಿಯಲ್ಲಿ ಹಣ ತೊಡಗಿಸಬೇಕು ಹಾಗೂ ಸದರಿ ವಸ್ತುಗಳನ್ನು ಪರಿಶೀಲನೆ ಮಾಡಬೇಕು ಎಂದು ತಿಳಿಸಿದರು. ನಂತರ 2 ಮತ್ತು 3 ನೇ ಆರೋಪಿತರು ದೊಡ್ಡ ಸ್ವಾಮಿಜೀ ರವರಿಗೆ ಪೋನ್ ಮಾಡಿ ಕಂಪನಿಯವರು ಹಣ ವಿನಿಯೋಗಿಸಬೇಕು ಎಂದು ಹೇಳುತ್ತಿದ್ದಾರೆ ಎಂದು ಅವರಿಗೆ ತಿಳಿಸಿದ್ದು, ಆಗ ಸ್ವಾಮಿಜೀ ರವರು ಹೌದು ಕಂಪನಿಗೆ 40-45 ಲಕ್ಷ ಹಣ ವಿನಿಯೋಗಿಸಿದರೇ ಸದರಿ ರೈಸ್ ಪುಲ್ ವಸ್ತು ಪರಿಶೀಲನೆ ಮಾಡಿ ವಸ್ತುಗಳು ಕಳಪೆಯಾಗಿದ್ದರೇ ಆ ಹಣವನ್ನು ನಾನು ವಾಪಾಸ್ಸು ಕೊಡುವುದಾಗಿ ಸ್ವಾಮಿಜೀ ನಮಗೆ ತಿಳಿಸಿದರು. ನಾನು ಆಗ 3 ನೇ ಆರೋಪಿ ರವರಿಂದ ಪೋನನ್ನು ತೆಗೆದುಕೊಂಡು ಸ್ವಾಮಿಜೀ ರವರ ಹೆಸರನ್ನು ಕೇಳಲಾಗಿ ಸ್ವಾಮಿಜೀ ನಾನು ಮಠದ ದೊಡ್ಡ ಸ್ವಾಮಿಜೀ ಇದ್ದು, ನನ್ನ ಹೆಸರನ್ನು ಹೇಳುವುದಿಲ್ಲ ನಾನು ಪೋನಿನಲ್ಲಿ ಮಾತ್ರ ಮಾತನಾಡುತ್ತೇನೆ, ನಾಳೆ ವ್ಯವಹಾರದಲ್ಲಿ ಸ್ವಲ್ಪ ತಪ್ಪಾದರೂ ಸಹ ನನ್ನ ಹೆಸರಿಗೆ ಕಳಂಕ ಬರುತ್ತದೆ ಎಂದು ಹೇಳಿದರು. ಆಗ ನಾನು ನನ್ನ ಬಳಿ ಅಷ್ಟು ಹಣ ಇಲ್ಲ ಎಂದು ಹೇಳಿ ಊರಿಗೆ ವಾಪಾಸ್ಸು ಬಂದಿರುತ್ತೇನೆ.

6. ನಂತರ ಒಂದು ವಾರದ ನಂತರ 2 ಮತ್ತು 3 ನೇ ಆರೋಪಿತರು ಬಂದು ವ್ಯವಹಾರವನ್ನು ಬಿಡುವುದು ಬೇಡ ನಾನು, ಚಾಸಾ 2 ಮತ್ತು ಅವರಿಬ್ಬರೂ ಸಹ ಹಣ ತೊಡಗಿಸೋಣ ಎಂದು ಹೇಳಿದ್ದು, ಸದರಿ ವ್ಯವಹಾರದಿಂದ ತುಂಬಾ ಲಾಭ ಇದೆ ಎಂದು ಹೇಳಿ ನನ್ನನ್ನು ಬಲವಂತದಿಂದ ಒಪ್ಪಿಸಿರುತ್ತಾರೆ. ಇದಾದ ಒಂದು ವಾರದ ನಂತರ 2 ಮತ್ತು 3 ನೇ ಆರೋಪಿತರು ವರ್ಬಂಡ್ ಇಂಟರ್ ನ್ಯಾಷನಲ್ ಓಸ್ಟ್ರೀಯಾ ಯು ಕೆ ಇದರ ಇಂಡಿಯಾ ಸಿ ಡಿ ಓ ಡಾ. ವಿ ಕೆ ಸಿಂಗ್ ಆಗಿದ್ದು, ಈ ಕಂಪನಿಯು ವ್ಯವಹಾರ ನಡೆಸುತ್ತಿದೆ. ಇದರ ಪ್ರತಿನಿಧಿಗಳು ಬೆಂಗಳೂರಿನಲ್ಲಿ ಸಿಗುತ್ತಾರೆ, ನೀವು ನಮ್ಮನ್ನು ಬೆಂಗಳೂರಿಗೆ ಬನ್ನಿ ಎಂದು ಕರೆದರು. ನಂತರ ನನ್ನನ್ನು ಮತ್ತು ಚಾಸಾ 2 ಬೆಂಗಳೂರಿಗೆ ಬರುವಂತೆ 2 ಮತ್ತು 3 ನೇ ಆರೋಪಿತರು ಹೇಳಿದ್ದು ನಾವು ಬೆಂಗಳೂರಿನ ಐ ಟಿ ಸಿ ಇಂಟರ್ ನ್ಯಾಷನಲ್ ಹೋಟೆಲ್ ಗೆ ಬರುವಂತೆ ತಿಳಿಸಿದ್ದು, ಅಲ್ಲಿಗೆ ಹೋದ ನಂತರ 2 ಮತ್ತು 3 ನೇ ಆರೋಪಿತರನ್ನು ಬೇಟಿಯಾಗಿ ನಮ್ಮನ್ನು ಕಂಪನಿಯ ಪ್ರತಿನಿಧಿಯಾದ ಮಹಮ್ಮದ್ ರಫಿ (4 ನೇ ಆರೋಪಿ) ರವರ ಸಹಾಯಕರು ನಮ್ಮನ್ನು ಕರೆದುಕೊಂಡು ಹೋಗಿದ್ದು, ನಾವು 4 ಜನ ಹೋಟೆಲ್ ನ ಒಳಗೆ ಹೋದಾಗ 4 ನೇ ಆರೋಪಿ ರವರ ಪರಿಚಯ ಮಾಡಿಕೊಂಡಿರುತ್ತೇವೆ. ನಂತರ ರೈಸ್ ಪುಲ್ ವ್ಯವಹಾರದ ಬಗ್ಗೆ ವಿಚಾರಿಸಿದಾಗ ಅವರು ಟೆಸ್ಟ್ ಮಾಡಲು ನಾವೇ ಬರುತ್ತೇವೆ. ಸದರಿ ಟೆಸ್ಟ್ ಮಾಡಲು ಕಂಪನಿಗೆ 45 ಲಕ್ಷ ಹಣ ಕಟ್ಟಬೇಕು, ಕಂಪನಿ ಕಟ್ಟಿದ ಹಣಕ್ಕೆ ದಾಖಲೆ ಕೊಡುವುದಿಲ್ಲ

ಹಾಗೂ ನಾವು ನಿಮಗೆ ಸೆಂಟ್ರಲ್ ಗೌರ್ವನಮೆಂಟ್ ನಿಂದ ಆ ಕೆಲಸ ಮಾಡಲು ಪರ್ಮಿಷನ್ ಮತ್ತು ನಿಮಗೆ ಹಣ ಕೊಟ್ಟ ಬಗ್ಗೆ ರಶೀದಿ ಹಾಗೂ ಕಾನೂನಿನ ರೀತ್ಯಾ ವಸ್ತುವಿನ ಬೆಲೆಯ ಹಣ ಕೊಡುತ್ತೇವೆ, ನಿಮಗೆ ಅಮೇರಿಕಾದಲ್ಲಿ ಬಂಗಲೆ, ಕಾರು ಹಾಗೂ ಐಷಾರಾಮಿ ಜೀವನ ನಡೆಸಲು ಅವಕಾಶ ಕಂಪನಿ ಕಡೆಯಿಂದ ಮಾಡಿಕೊಡುತ್ತೇವೆ ಎಂದು ಆಮಿಷ ತೋರಿಸಿರುತ್ತಾರೆ.

7. ನಂತರ ಸದರಿ ಈ ವಿಚಾರವನ್ನು ನಾವು ಸ್ವಾಮಿಜೀ ರವರಿಗೆ ಫೋನ್ ಮುಖಾಂತರ ತಿಳಿಸಿ ನಾವು ಊರಿಗೆ ವಾಪಾಸ್ಸು ಬಂದಿರುತ್ತೇವೆ. ಸ್ವಾಮಿಜೀ ರವರಿಗೆ ಫೋನ್ ಮಾಡಿದಾಗ ಅವರು ಹಣ ಕಟ್ಟಿ, ಸಣ್ಣ ಸ್ವಾಮಿಜೀರವರಿಗೆ ಹೇಳಿ ವಸ್ತು ಪರೀಕ್ಷಿಸಲು ಕಂಪನಿಯವರಿಗೆ ತೋರಿಸುತ್ತೇವೆ ಎಂದು ಹೇಳಿದರು. ಆಗ 2 ನೇ ಆರೋಪಿ ತನ್ನ ಬಳಿ ವ್ಯವಹಾರದಲ್ಲಿ ಹಣ ಹಾಕಲು ಹಣ ಇಲ್ಲವೆಂದು ತಿಳಿಸಿ ವ್ಯವಹಾರದಿಂದ ವಾಪಾಸ್ಸು ಸರಿದಿರುತ್ತಾನೆ. ನಂತರ ದಿ: 20/10/2016 ರಂದು ನನ್ನ ಬಳಿ ಇದ್ದ ರೂ. 24 ಲಕ್ಷ (ನನ್ನ ಹೆಂಡತಿಯ ಕರ್ನಾಟಕ ಬ್ಯಾಂಕ್, ಕುದುರೆಗುಂಡಿ ಖಾತೆಯಲ್ಲಿದ್ದ 1,70,000/-, ನನ್ನ ಅಣ್ಣನ ಬಳಿಯಿಂದ 3 ಲಕ್ಷ ರೂ., ಉಳಿದ 19,30,000/- ಹಣವನ್ನು ಕೈ ಸಾಲ ಹಾಗೂ ನಮ್ಮ ಜಮೀನಿಗೆ ಸಂಬಂಧಿಸಿದ ಖರ್ಚಿಗಾಗಿ ಇಟ್ಟಿದ್ದ ಹಣವನ್ನು ಪಡೆದು ಹಾಗೂ ಚಾಸಾ 2 ರವರು ಸಹ ನನಗೆ 6 ಲಕ್ಷ ರೂ. ವನ್ನು) 3 ನೇ ಆರೋಪಿ ರವರು 15 ಲಕ್ಷ ಹಣವನ್ನು ಒಟ್ಟು ಮಾಡಿರುವುದಾಗಿ ಹೀಗೆ ಒಟ್ಟು 45 ಲಕ್ಷ ಹಣವನ್ನು ನಾನು ಮತ್ತು ಇಂತಿಯಾಜ್ ರವರು ತೆಗೆದುಕೊಂಡು 3 ಜನ ಬೆಂಗಳೂರಿಗೆ ದಿ: 21/10/2016 ರಂದು ಹೋಗಿ 3 ನೇ ಆರೋಪಿ ಮಹಮ್ಮದ್ ರಫಿಕ್ ರವರಿಗೆ ಫೋನ್ ಮಾಡಿದ್ದು ಅವರು ಬೆಳಿಗ್ಗೆ 10.00 ಗಂಟೆಗೆ ಲಲಿತ್ ಅಶೋಕ್ ಹೋಟೆಲ್ ಗೆ ಬರುವಂತೆ ಹೇಳಿರುತ್ತಾರೆ.

8. ನಾವು ಸದರಿ ಹೋಟೆಲ್ ಗೆ ಹೋಗಿ ಮಹಮ್ಮದ್ ರಫಿಕ್ ರವರು ಕಾಫಿ ಕುಡಿಯುತ್ತಿದ್ದ ಟೇಬಲ್ ಹತ್ತಿರ ಹೋಗಿ ಕುಳಿತು, ಟೇಬಲ್ ಮೇಲೆ ಹಣವನ್ನು ಎಣಿಸಿಕೊಟ್ಟಿದ್ದು, ಸದರಿ ಹೋಟೆಲ್ ನ ಸಿ ಸಿ ಟಿ ವಿ ಕ್ಯಾಮೆರಾದಲ್ಲಿ ಹಣ ಕೊಟ್ಟಿರುವುದು ಸೆರೆಯಾಗಿರುತ್ತದೆ. ಸದರಿಯವರು ಟೆಸ್ಟ್ ಗೆ ದೆಹಲಿಯಿಂದ ಕರೆದುಕೊಂಡು ಬರುತ್ತೇವೆ ನೀವು ಊರಿಗೆ ಹೋಗುವಂತೆ ನಮ್ಮ ಜೊತೆ ಊಟ ಮಾಡಿ ಎಂದು ಹೇಳಿ ನಾವು ನೀಡಿದ ಹಣವನ್ನು ಕಂಪನಿಗೆ ಕಟ್ಟುವುದಾಗಿ ತೆಗೆದುಕೊಂಡು ಹೋದರು. ನಂತರ ನಾವು ಈ ವಿಚಾರವನ್ನು ಸ್ವಾಮಿಜೀ ರವರಿಗೆ ತಿಳಿಸಿ ಊರಿಗೆ ವಾಪಾಸ್ಸು ಬಂದಿರುತ್ತೇವೆ. ದಿ: 25/10/2016 ರಂದು ಸ್ವಾಮಿಜಿ ರವರು ನಿಗದಿ ಪಡಿಸಿದ ದಿನಾಂಕದಂದು ಕಂಪನಿಯವರು ಹೊಸದುರ್ಗಕ್ಕೆ ಟೆಸ್ಟ್ ಮಾಡುವ ಸಲುವಾಗಿ ಬರುತ್ತಿದ್ದಾರೆ ಎಂದು ಹೇಳಿದ್ದು,

ನಾನು ಮತ್ತು ಚಾಸಾ 2 ರವರು ನಮ್ಮ ಊರಿನಿಂದ ಹೊಸದುರ್ಗಕ್ಕೆ ಹೋಗಿದ್ದು ಅಲ್ಲಿಗೆ 3 ನೇ ಆರೋಪಿ ರವರು ಬಂದಿರುತ್ತಾರೆ. ಕಂಪನಿಯ ಪ್ರತಿನಿಧಿಯಾಗಿ ಮಹಮ್ಮದ್ ರಫಿ ಮತ್ತು ಆತನ ಸಹಚರರು ಹಾಗೂ ಪರೀಕ್ಷಕರು ಬೂದು ಬಣ್ಣದ ಟೊಯೋಟೋ ಫಾರ್ಚುನರ್ ಕಾರ್ ನಂ፥ ಕೆಎ 51 ಎಂ ಎ 1040 ರಲ್ಲಿ ಬಂದಿರುತ್ತಾರೆ. ಹೊಸದುರ್ಗದಿಂದ ಸ್ವಾಮಿಜಿ ರವರು ಹೇಳಿದ ಜಾಗಕ್ಕೆ ಹೋಗುವ ಅರ್ಧ ದಾರಿಯಲ್ಲಿ ಸಣ್ಣ ಸ್ವಾಮಿಜಿ ರವರು ಟೊಯೋಟೋ ಇನ್ನೋವಾ ಕಾರಿನಲ್ಲಿ ಬಂದಿದ್ದು ನಮ್ಮ ಕಾರುಗಳನ್ನು ನಿಲ್ಲಿಸಿ, ರೈಸ್ ಪುಲ್ ಟೆಸ್ಟ್ ಮಾಡುವ ಕಂಪನಿಯವರು ಮಾತ್ರ ಒಳಗೆ ಬರುವಂತೆ ತಿಳಿಸಿದರು. ಆಗ ಮಹಮ್ಮದ್ ರಫಿ ತನ್ನ ಇಬ್ಬರು ಸಹಚರರು ಸೇರಿ ರೈಸ್ ಪುಲ್ ವಸ್ತುವನ್ನು ಪರೀಕ್ಷಿಸುವ ಮುನ್ನ ನೀವು ಮುಮೆಂಟ್ ಲೆಟರ್ ಗಳಿಗೆ ಸಹಿ ಮಾಡಬೇಕು ಇಲ್ಲವಾದಲ್ಲಿ ನಾವು ಟೆಸ್ಟ್ ಮಾಡುವುದಿಲ್ಲ ಹಾಗೂ ನೀವು ನೀಡಿದ ಹಣ ನಿಮಗೆ ಸಿಗುವುದಿಲ್ಲ, ನಾವು ವಾಪಾಸ್ಸು ಹೋಗುತ್ತೇವೆ ಎಂದು ಹೆದರಿಸಿದರು. ನಂತರ ಸಣ್ಣ ಸ್ವಾಮಿಜಿ ರವರನ್ನು ಕೇಳಿದಾಗ ನಿಮ್ಮ ಹೆಸರಿನಲ್ಲಿ ವ್ಯವಹಾರ ಮಾಡಲು ದೇವರ ಅಪ್ಪಣೆಯಾಗಿರುವುದರಿಂದ ನೀವೇ ಸಹಿ ಮಾಡತಕ್ಕದ್ದು ಎಂದು ಹೇಳಿದರು. ನಂತರ ಮಹಮ್ಮದ್ ರಫಿ ಮತ್ತು ಆತನ ಸಹಚರರು ಬಲವಂತವಾಗಿ ನನ್ನಿಂದ ಸುಮಾರು 10-12 ಖಾಲಿ ಪೇಜುಗಳಿಗೆ ಹಾಗೂ ಛಾಪಾ ಕಾಗದಗಳಿಗೆ ನನ್ನ ಸಹಿಯನ್ನು ಬಲವಂತದಿಂದ ಹಾಕಿಸಿಕೊಂಡಿರುತ್ತಾರೆ.

9. ನಾವು ಕಂಪನಿಗೆ ಸಹಿ ಮಾಡಿದ ದಾಖಲೆಯನ್ನು ಕಳುಹಿಸುತ್ತೇವೆ. ಅವರು ಸೆಂಟ್ರಲ್ ಗೌರ್ನಮೆಂಟ್ ನಿಂದ ಕಾನೂನು ಮಾನ್ಯತೆ ಪಡೆದುಕೊಂಡು ಬರುವುದಾಗಿ ತಿಳಿಸಿದರು. ನಂತರ ನಮ್ಮನ್ನು ಅಲ್ಲಿಯೇ ಬಿಟ್ಟು ಸಣ್ಣ ಸ್ವಾಮಿಜೀಯ ಜೊತೆ ರೈಸ್ ಪುಲ್ ವಸ್ತುವನ್ನು ಟೆಸ್ಟ್ ಮಾಡುತ್ತೇವೆ ಎಂದು ಹೇಳಿ ಮಹಮ್ಮದ್ ರಫಿ ಮತ್ತು ಆತನ ಸಹಚರರು ಹೋಗಿರುತ್ತಾರೆ. ಅರ್ಧ ಗಂಟೆಯ ನಂತರ ದೊಡ್ಡ ಸ್ವಾಮಿಜೀ ಯವರು 3 ನೇ ಆರೋಪಿಗೆ ಫೋನ್ ಮಾಡಿ ರೈಸ್ ಪುಲ್ ವಸ್ತು ಅಪಾಯಕಾರಿ ಕಿರಣಗಳನ್ನು ಹೊರಸೂಸುವುದರಿಂದ ಹಾಗೂ ದೇಹಕ್ಕೆ ಮಾರಕವಾಗುವುದರಿಂದ ದೊಡ್ಡ ಜಾಕೇಟ್ ತರಬೇಕಿತ್ತು ಎಂದು ವಿಜಯಕುಮಾರ್ ರವರಿಗೆ ತಿಳಿಸಿದ್ದು ಆದರೂ ಸಹ ಸಣ್ಣ ಜಾಕೇಟ್ ನಲ್ಲೂ ಟೆಸ್ಟ್ ಪಾಸಾಗಿದೆ ಎಂದು ಹೇಳಿದರು. ಆದರೆ ಈ ವಸ್ತುವನ್ನು ಸಂಪೂರ್ಣವಾಗಿ ಪರೀಕ್ಷಿಸಲು ದೊಡ್ಡ ಜಾಕೇಟ್ ಬೇಕು ಎಂದು ಮಹಮ್ಮದ್ ರಫಿ ರವರ ಸಹಚರರು ಸ್ವಾಮಿಜೀ ರವರಿಗೆ ಹೇಳಿದ್ದು ಸದರಿ ವಿಚಾರವನ್ನು ವಿಜಯಕುಮಾರ್ ರವರಿಗೆ ಕರೆ ಮಾಡಿ ಸ್ವಾಮಿಜೀ ತಿಳಿಸಿರುತ್ತಾರೆ. ನಂತರ ಅರ್ಧ ಗಂಟೆ ನಂತರ ಮಹಮ್ಮದ್ ರಫಿ ಮತ್ತು ಆತನ

ಸಹಚರರು ಹಾಗೂ ಪರೀಕ್ಷಕರು ನಾವಿದ್ದಲ್ಲಿಗೆ ಬಂದು ದೊಡ್ಡ ಜಾಕೇಟ್ ತರಲು ಮತ್ತೆ ಹಣ ಕಟ್ಟಬೇಕಾಗುತ್ತದೆ ಎಂದು ಹೇಳಿ ಬೆಂಗಳೂರಿಗೆ ಹೊರಟು ಹೋಗಿರುತ್ತಾರೆ.

10. ಇದಾದ ನಂತರ ಮಹಮ್ಮದ್ ರಫಿ ರವರು ನನಗೆ ಕರೆ ಮಾಡಿ ನಾವು ಕಂಪನಿಯ ಎಂ ಡಿ ಹತ್ತಿರ ಮಾತನಾಡಿದ್ದೇವೆ. ನಾವು ದೊಡ್ಡ ಜಾಕೇಟ್ ತಂದು ಟೆಸ್ಟ್ ಮಾಡಲು 1,10,00,000/- ಹಣ ಬೇಕಾಗಿರುತ್ತದೆ, ಈ ವಸ್ತು ತುಂಬಾ ಚೆನ್ನಾಗಿದೆ, ಈ ವ್ಯವಹಾರ ಬಿಡುವುದು ಬೇಡ ಹೇಗಾದರೂ ಹಣವನ್ನು ಸೇರಿಸಿಕೊಡಿ ನಾನು ಕಂಪನಿಗೆ ಹೇಳಿ ವ್ಯವಹಾರ ಮಾಡಿಸುತ್ತೇನೆ ಎಂದು ಸುಳ್ಳು ಹೇಳಿ ಮೋಸ ಮಾಡುವ ಪಿತೂರಿ ಮಾಡಿರುತ್ತಾರೆ. ನಂತರ ಈ ವಿಚಾರವನ್ನು ಸ್ವಾಮಿಜೀ ರವರಿಗೆ ತಿಳಿಸಿದಾಗ ನಮ್ಮ ಬಳಿ ಹಣವಂತರು ಬಹಳ ಜನ ಇದ್ದಾರೆ ಆದರೆ ದೇವರ ಅಪ್ಪಣೆ ನಿಮ್ಮ ಹೆಸರಿನಲ್ಲಿ ಆಗಿರುವುದರಿಂದ ಈ ಹಣವನ್ನು ಹೊಂದಿಸುವ ಕೆಲಸ ನೀವೇ ಮಾಡಬೇಕು ಎಂದು ಹಾಗೂ ಸಾಮಾನ್ಯ ಜನರಿಗೆ ಅನುಕೂಲ ಆಗಲಿ ಎಂದು ತಿಳಿಸಿರುತ್ತಾರೆ.

11. ದಿ፥ 28/10/2016 ರಂದು ವಿಜಯಕುಮಾರ ರವರು ತಾವು 23 ಲಕ್ಷ ರೂ. ಕ್ರೂಢೀಕರಿಸುವುದಾಗಿ ಹಾಗೂ ನಾನು 50,50,000/- ಹಣವನ್ನು(ಋಷಿಶೃಂಗ ಅಡಿಕೆ ಮಂಡಿಯಿಂದ 50 ಲಕ್ಷ ರೂ. ಗಳನ್ನು ನಮ್ಮ ತಂದೆ ಸಾಲವಾಗಿ ಪಡೆದಿದ್ದು ತಮ್ಮ ಖಾತೆಯಿಂದ ನನಗೆ ಡ್ರಾ ಮಾಡಿ ನೀಡಿದ್ದು ಉಳಿದ 50 ಸಾವಿರ ಹಣವನ್ನು ಅದೇ ಮಂಡಿಯಲ್ಲಿ ಕೈ ಸಾಲ ಪಡೆದಿರುತ್ತೇವೆ .) ಹಾಗೂ ಚಾಸಾ 2 ರವರು 50 ಸಾವಿರ ಒಟ್ಟಿಗೆ ಹೊಂದಿಸಿಕೊಂಡು ಬಂದಿರುವುದಾಗಿ, ನಾವು ಮಹಮ್ಮದ್ ರಫಿ ರವರಿಗೆ ಫೋನ್ ಮಾಡಿ ನಮ್ಮ ಕಡೆ ರೂ. 74 ಲಕ್ಷ ಹೊಂದಿಸಲು ಸಾದ್ಯವಾಗಿದೆ ಅಷ್ಟೆ ಎಂದು ಹೇಳಿದ್ದು, ಆಗ ಮಹಮ್ಮದ್ ರಫಿ ರವರು ಉಳಿದ ಹಣವನ್ನು ತಾವು ಹೊಂದಿಸುವುದಾಗಿ ನಮ್ಮನ್ನು ಬೆಂಗಳೂರಿಗೆ ಹಣ ತೆಗೆದುಕೊಂಡು ಬರುವಂತೆ ತಿಳಿಸಿದರು. ಅದೇ ದಿನ ನಾನು ಮತ್ತು ಚಾಸಾ 2 ರವರು ಹಣವನ್ನು ತೆಗೆದುಕೊಂಡು ರಾತ್ರಿ 8.00-10.00 ಗಂಟೆ ಸುಮಾರಿಗೆ ಹೋಗಿದ್ದು, ಮಹಮ್ಮದ್ ರಫಿ ರವರಿಗೆ ಫೋನ್ ಮಾಡಿ ಅವರು ನಮ್ಮನ್ನು ಲಲಿತ್ ಅಶೋಕ್ ಹೋಟೆಲ್ ಗೆ ಬರಲು ಹೇಳಿದರು. ಆಗ ನಾವು ಹಣ ತೆಗೆದುಕೊಂಡು ಹೋಟೆಲ್ ಒಳಗೆ ಹೋಗುವಾಗ ಸೆಕ್ಯೂರಿಟಿ ರವರು ಸದರಿ ಹಣದ ಬ್ಯಾಗನ್ನು ಚೆಕ್ ಮಾಡುವ ಸಮಯದಲ್ಲಿ ಎಕ್ಸ್ ರೇ ಮಿಷನ್ ನಲ್ಲಿ ಪರೀಕ್ಷಿಸಲಾಗಿ ಇದರಲ್ಲಿ ಏನಿದೆ ಎಂದು ವಿಚಾರಿಸಿ ಬ್ಯಾಗನ್ನು ತೆರೆಯಲು ತಿಳಿಸಿದರು ಹಾಗೂ ಇಷ್ಟೊಂದು ಹಣ ಎಲ್ಲಿಗೆ ಎಂದು ನಮ್ಮನ್ನು ಪ್ರಶ್ನಿಸಿದಾಗ ಆಗ ಮಹಮ್ಮದ್ ರಫಿ ಮತ್ತು ಆತನ ಸಹಚರರು ಬಂದು ಇವರು ನಮ್ಮವರೇ ತೊಂದರೆ ಇಲ್ಲ ಬಿಟ್ಟುಬಿಡಿ ಎಂದು

ಹೇಳಿ ಹಣದ ಚೀಲವನ್ನು ಮುಚ್ಚಿ ನಮ್ಮನ್ನು ಒಳಗೆ ಕರೆದುಕೊಂಡು ಹೋದರು. ಆಗ ಮಹಮ್ಮದ್ ರಫಿ ರವರು ಕಂಪನಿಯವರು ನಿಮ್ಮ ಹೆಸರಿನಲ್ಲಿ ರೂಮು ಬುಕ್ ಮಾಡಿದ್ದಾರೆ ನೀವು ಲಾಡ್ಜ್ ಬುಕ್ ನಲ್ಲಿ ನಿಮ್ಮ ಹೆಸರು ಮತ್ತು ವಿಳಾಸ ಬರೆದು ಸಹಿ ಮಾಡುವಂತೆ ಹೇಳಿರುತ್ತಾರೆ.

12. ನಂತರ ನಮ್ಮನ್ನು ರೂಮಿಗೆ ಕರೆದುಕೊಂಡು ಹೋಗುವಾಗ ಅಲ್ಲಿ ಸಿ ಸಿ ಕ್ಯಾಮೆರಾ ಇದ್ದು, ನಮ್ಮ ಬ್ಯಾಗನ್ನು ಚೆಕ್ ಮಾಡಿರುವುದು ಹಾಗೂ ನಾವು ಲಾಡ್ಜ್ ಬುಕ್ ನಲ್ಲಿ ಸಹಿ ಮಾಡಿರುವುದು ಸಿ ಸಿ ಟಿ ವಿ ದೃಶ್ಯಾವಳಿಯಲ್ಲಿ ಸೆರೆಯಾಗಿರುತ್ತದೆ. ಆಗ ರೂಮಿನ ಒಳಗೆ ಮಹಮ್ಮದ್ ರಫಿ ಮತ್ತು ಆತನ ಸಹಚರರು ನಾವು ತಂದಿದ್ದ ಹಣವನ್ನು ಎಣಿಕೆ ಮಾಡಿ ಅವರು ತಂದಿದ್ದ ಬೇರೊಂದು ಬ್ಯಾಗಿನಲ್ಲಿ ಹಾಕಿಕೊಂಡು ನೀವು ಇಲ್ಲಿಯೇ ಇದ್ದು ಬೆಳಿಗ್ಗೆ ಹೋಗಿ ಎಂದ ಹೇಳಿದ್ದು ಆ ಕಾಲಕ್ಕೆ ನಾನು ವಿಜಯಕುಮಾರ್ ರವರು ಹಣ ಕೊಟ್ಟಿರುತ್ತಾರಾ ಎಂದು ವಿಚಾರಿಸಿದಾಗ ಅವರು ಬೆಳಿಗ್ಗೆನೇ 23 ಲಕ್ಷ ರೂ. ಹಣ ತಂದು ಕೊಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ. ನಂತರ ನಾವು ಮಹಮ್ಮದ್ ರಫಿ ರವರಿಗೆ ಹಣ ಕೊಟ್ಟ ವಿಚಾರವನ್ನು ಸ್ವಾಮಿಜೀ ರವರಿಗೆ ತಿಳಿಸಿರುತ್ತೇವೆ.

13. ಆದಾದ 3 ದಿನಗಳ ನಂತರ ಸ್ವಾಮಿಜಿ ರವರು ಪೋನ್ ಮಾಡಿ ಈ ರೈಸ್ ಪುಲ್ ವಸ್ತುವಿನ ವಾರಸುದಾರ ಜಮೀನುದಾರರು ತನಗೆ ಇದರ ಪರಿಹಾರವಾಗಿ 10 ಕೋಟಿ ರೂಪಾಯಿಗಳು ಬೇಕಾಗಿರುತ್ತದೆ ಎಂದು ಕೇಳುತ್ತಿದ್ದಾನೆ, ಅದಕ್ಕೆ ಕಂಪನಿಯವರಿಗೆ ಪೋನ್ ಮಾಡಿ ಹೇಳಿ ಕಂಪನಿಯವರೇ 10 ಕೋಟಿ ರೂ. ಗಳನ್ನು ತೆಗೆದುಕೊಂಡು ಬರಲು ಎಂದು ಹೇಳಿದ್ದರಿಂದ ನಾನು ಕಂಪನಿಯವರಿಗೆ ಪೋನ್ ಮಾಡಿದಾಗ, ನಾವು ರೈಸ್ ಪುಲ್ ವಸ್ತುವನ್ನು ಟೆಸ್ಟ್ ಮಾಡಿ ಬೇರೆ ಕಡೆ ಸ್ಥಳಾಂತರಿಸಿದ ನಂತರ ಕಂಪನಿಯವರು ನಿಮ್ಮ ಹಣವನ್ನು ಕೊಡುತ್ತಾರೆ ಎಂದು ತಿಳಿಸಿದರು. ನಂತರ ಈ ವಿಚಾರವನ್ನು ನಾವು ಸ್ವಾಮಿಜೀ ರವರಿಗೆ ತಿಳಿಸಿದ್ದು ಆಗ ಸ್ವಾಮಿಜೀ ರವರು ಆಯ್ತು ನಾವು ಜಮೀನುದಾರರಿಗೆ ಹೇಳುತ್ತೇವೆ, ನೀವು ಕಂಪನಿಯವರಿಗೆ ಬರಲು ಹೇಳಿ ಎಂದು ಹೇಳಿದರು. ನಂತರ 3 ದಿನಗಳ ನಂತರ ಕಂಪನಿಯವರು ಟೆಸ್ಟ್ ಮಾಡಲು ಹೊಸದುರ್ಗಕ್ಕೆ ಬಂದಿದ್ದು ಆಗಲೂ ಕೂಡಾ ನಮ್ಮನ್ನು ಸಣ್ಣ ಸ್ವಾಮಿಜೀ ರವರು ಮೊದಲಿನಂತೆ ನಮ್ಮನ್ನು ಅರ್ಧ ದಾರಿಯಲ್ಲಿ ನಿಲ್ಲಿಸಿ ಕಂಪನಿಯವರನ್ನು ಮಾತ್ರ ನಾನು ಕಳುಹಿಸುವ ವ್ಯಕ್ತಿಯೊಂದಿಗೆ ಬರಲು ಹೇಳಿರುತ್ತಾರೆ. ಆ ಸಮಯದಲ್ಲಿ ಸಹ ಮಹಮ್ಮದ್ ರಫಿ, ಸಹಚರರು ಮತ್ತು ಸ್ವಾಮಿಜೀ ರವರು ದುರುದ್ದೇಶದಿಂದ ಹಾಗೂ ಮೋಸ ಮಾಡುವ ಉದ್ದೇಶದಿಂದ ನನ್ನ ಕಡೆಯಿಂದ 10-12 ಖಾಲಿ ಹಾಳೆಗಳಿಗೆ ಸಹಿ

ಮಾಡಿಸಿಕೊಂಡಿರುತ್ತಾರೆ ಹಾಗೂ ಅದರಲ್ಲಿ 4-5 ಛಾಪಾ ಕಾಗದಗಳು ಇದ್ದು, ನೀವು ಸಹಿ ಮಾಡದೇ ಇದ್ದಲ್ಲಿ ನಾವು ವಾಪಾಸ್ಸು ಹೋಗುತ್ತೇವೆ ಹಾಗೂ ನೀವು ಹಾಕಿರುವ ದುಡ್ಡು ನಿಮಗೆ ವಾಪಾಸ್ಸು ನೀಡುವುದಿಲ್ಲ ಮತ್ತು ರೈಸ್ ಪುಲ್ ವಸ್ತುವನ್ನು ಪರೀಕ್ಷಿಸುವುದಿಲ್ಲ ಎಂದು ಹೆದರಿಸಿ -ಬೆದರಿಸಿ ಮುಮೆಂಟ್ ಲೆಟರ್ ಗಳಿಗೆ ನನ್ನ ಸಹಿಗಳನ್ನು ಬಲವಂತವಾಗಿ ಪಡೆದಿರುತ್ತಾರೆ ಹಾಗೂ ನಮ್ಮನ್ನು ಅಲ್ಲಿಯೇ ಬಿಟ್ಟು ರೈಸ್ ಪುಲ್ ಟೆಸ್ಟ್ ಮಾಡುವುದಾಗಿ ಹೋಗಿರುತ್ತಾರೆ.

14. ಆದಾದ ಅರ್ಧ ಗಂಟೆ ನಂತರ ಸಣ್ಣ ಸ್ವಾಮಿಜೀ ರವರು ತಮ್ಮ ಇನ್ನೋವಾ ಕಾರಿನಲ್ಲಿ ತಮ್ಮ ಜೊತೆ ಇಬ್ಬರು ರೈತರನ್ನು ರೈಸ್ ಪುಲ್ ವಸ್ತುವಿನ ವಾರಸುದಾರರು ಎಂದು ಕರೆದುಕೊಂಡು ಬಂದಿರುತ್ತಾರೆ. ಆಗ ಮಹಮ್ಮದ್ ರಫಿ, ಆತನ ಸಹಚರರು ಹಾಗೂ ಟೆಸ್ಟರ್ ಗಳು ಸಹ ಅವರೊಂದಿಗೆ ಬಂದಿರುತ್ತಾರೆ. ಆಗ ಸದರಿ ರೈಸ್ ಪುಲ್ ವಸ್ತುವನ್ನು ದೊಡ್ಡ ಜಾಕೇಟ್ ಹಾಕಿಕೊಂಡು ಪರೀಕ್ಷೆ ಮಾಡಿ, ಪ್ಯಾಕಿಂಗ್ ಕಿಟ್ ನಲ್ಲಿ ಪ್ಯಾಕ್ ಮಾಡಿ ಸುರಕ್ಷಿತವಾಗಿ ಇಟ್ಟಿರುತ್ತೇವೆ ಎಂದು ಹೇಳಿದ್ದು ಅದನ್ನು 2 ಗಂಟೆಯ ಒಳಗೆ ಬೇರೆ ಜಾಗಕ್ಕೆ ಸ್ಥಳಾಂತರಿಸಿ ಎಂದು ಹೇಳಿದ್ದರು ಆದರೆ ರೈತರು ರೈಸ್ ಪುಲ್ ವಸ್ತುವನ್ನು ಸ್ಥಳಾಂತರಿಸಲು ಬಿಡುತ್ತಿಲ್ಲ, ನೀವೇ ಅವರನ್ನು ಮನವೊಲಿಸುವಂತೆ ನಮಗೆ ಹೇಳಿದ್ದರು. ನಾವು ಎಷ್ಟೇ ಹೇಳಿದರೂ ಅವರು ಒಪ್ಪಿಕೊಳ್ಳಲಿಲ್ಲ ಆಗ ಸಣ್ಣ ಸ್ವಾಮಿಜೀ ರವರು ದೊಡ್ಡ ಸ್ವಾಮಿಜೀ ರವರಿಗೆ ಫೋನ್ ಮಾಡಿ ಅವರಿಗೆ ಮನವೊಲಿಸಲು ಪ್ರಯತ್ನಿಸಿದರೂ ಒಪ್ಪದೇ ಇದ್ದಾಗ ದೊಡ್ಡ ಸ್ವಾಮಿಜೀ ರವರು ಅವರನ್ನು ನೀವು ಬಸ್ ಸ್ಟ್ಯಾಂಡ್ ಹತ್ತಿರ ಇರಿ ನಾನೇ ಮನವೊಲಿಸಲು ಪ್ರಯತ್ನಿಸುತ್ತೇನೆ ಎಂದು ಹೇಳಿ ನಮ್ಮನ್ನು ಅಲ್ಲಿಂದ ಕಳುಹಿಸಿದರು.

15. ಅದೇ ದಿನ ಮ.2.00 ಗಂಟೆ ಸಮಯಕ್ಕೆ ದೊಡ್ಡ ಸ್ವಾಮಿಜೀ ರವರು ನನಗೆ ಫೋನ್ ಮಾಡಿ ನಾನೇ ರೈತರಿಗೆ 10 ಕೋಟಿ ಸೇರಿಸಿಕೊಟ್ಟು ನಂತರ ಕಂಪನಿಯವರಿಗೆ ಬರಲು ಹೇಳೋಣ ಎಂದು ಹೇಳಿ ನಮ್ಮನ್ನು ಊರಿಗೆ ಕಳುಹಿಸಿರುತ್ತಾರೆ. ಆದಾದ ನಂತರ 1 ತಿಂಗಳವರೆಗೆ ಮಹಮ್ಮದ್ ರಫಿಯಾಗಲೀ ಮತ್ತು ಸ್ವಾಮಿಜೀ ರವರು ಫೋನ್ ಮಾಡಿದರೂ ಸ್ವೀಕರಿಸುತ್ತಿರಲಿಲ್ಲ ಹಾಗೂ ಆ ಕಾಲಕ್ಕೆ ನೋಟು ಬ್ಯಾನ್ ಆಗಿದ್ದು, ಹಣ ಹೊಂದಿಸುವುದು ತುಂಬಾ ಕಷ್ಟವಾಗಿದೆ ಎಂದು 1-1 ವರೆ ತಿಂಗಳು ಮುಂದೂಡುತ್ತಾ ನಮ್ಮ ಜೊತೆ ಸಹಿ ಮಾಡಿಸಿಕೊಂಡ ಖಾಲಿ ಹಾಳೆಗಳು ಮತ್ತು ಛಾಪಾ ಕಾಗದಗಳನ್ನು ವಾಪಾಸ್ಸು ಕೊಡಲಿಲ್ಲ. ಆದಾದ 1 ತಿಂಗಳ ನಂತರ ಸ್ವಾಮಿಜೀ ರವರು ನನಗೆ ಕರೆ ಮಾಡಿ 10 ಕೋಟಿ ರೂ. ಹಣವನ್ನು ನಾನು ರೈತರಿಗೆ ಕೊಟ್ಟಿರುತ್ತೇನೆ, ನೀವು ಮಹಮ್ಮದ್ ರಫಿ ಗೆ

ಪೋನ್ ಮಾಡಿ ಕರೆಸಿ ಎಂದು ನನಗೆ ತಿಳಿಸಿದರು. ನಾನು ಮಹಮ್ಮದ್ ರಫಿ ರವರಿಗೆ ಪೋನ್ ಮಾಡಿ ಸ್ವಾಮಿಜೀ ರವರು 10 ಕೋಟಿ ಹಣವನ್ನು ರೈತರಿಗೆ ಕೊಟ್ಟಿರುತ್ತಾರೆ, ನೀವು ಬನ್ನಿ ಎಂದು ಕರೆದಾಗ ಮಹಮ್ಮದ್ ರಫಿರವರು ತಾವು ಮಾಡಿದ ಪ್ಯಾಕಿಂಗ್ ಕಿಟ್ ಹಾಳಾಗಿದ್ದು, ಪುನಃ ರೈಸ್ ಪುಲ್ ವಸ್ತುವನ್ನು ಪ್ಯಾಕ್ ಮಾಡಲು ಪ್ಯಾಕಿಂಗ್‌ಕಿಟ್ ತರಬೇಕು ಅದಕ್ಕೆ 45 ಲಕ್ಷ ರೂ. ಬೇಕು ಎಂದು ನಮಗೆ ಹೇಳಿದರು. ದಿಃ 19/12/2016 ರಂದು ನಾನು 20 ಲಕ್ಷ ರೂ. ಗಳನ್ನು ನನ್ನ ಮಾವ ಮತ್ತು ಸಂಬಂಧಿಕರಿಂದ ಹಾಗೂ 5 ಲಕ್ಷ ರೂ.ವನ್ನು ವಿಜಯಕುಮಾರ್ ರವರು ಕೊಡುವುದಾಗಿ ತಿಳಿಸಿದ್ದು, ನಾವು ಸದರಿ ಹಣವನ್ನು ತೆಗೆದುಕೊಂಡು ಬೆಂಗಳೂರಿಗೆ ಹೊರಟೆನು. ಆಗ ನನ್ನ ತಂದೆಯವರು ಇದು 3 ನೇ ಬಾರಿ ಹಣವನ್ನು ತೆಗೆದುಕೊಂಡು ಹೋಗುತ್ತಿದ್ದೀಯಾ ಏನು ವ್ಯವಹಾರ ಮಾಡುತ್ತೀದ್ದಿಯಾ ಎಂದು ಕೇಳಿದಾಗ ನಾನು ನಡೆದ ವಿಚಾರವನ್ನು ನನ್ನ ತಂದೆಗೆ ಸಂಪೂರ್ಣವಾಗಿ ತಿಳಿಸಿರುತ್ತೇನೆ. ಆಗ ನಮ್ಮ ತಂದೆಯವರು ಅದು ಏನು ವ್ಯವಹಾರ ನಾನು ನೋಡುತ್ತೇನೆ, ಅವರನ್ನು ತೋರಿಸು ಎಂದು ಹೇಳಿದ್ದು ನನ್ನ ಮತ್ತು ಚಾಸಾ 2 ರವರ ಜೊತೆ ನಮ್ಮ ತಂದೆ ಬೆಂಗಳೂರಿಗೆ ಬಂದಿರುತ್ತಾರೆ.

16. ನಂತರ ಮಹಮ್ಮದ್ ರಫಿ ರವರು ಹೇಳಿದ ಲಲಿತ್ ಅಶೋಕ್ ಹೋಟೆಲ್ ಗೆ ಹೋಗಿ ನಮ್ಮ ತಂದೆಯನ್ನು ಮಹಮ್ಮದ್ ರಫಿ ರವರಿಗೆ ಪರಿಚಯ ಮಾಡಿಸಿರುತ್ತೇನೆ. ಆಗ ಮಹಮ್ಮದ್ ರಫಿರವರು ನಾನು ಏನು ವ್ಯವಹಾರ ಮಾಡುತ್ತೇನೆ ಎಂಬುದರ ಬಗ್ಗೆ ಅವರಿಗೆ ವಿವರವಾಗಿ ಹೇಳಿದ್ದು ಸದರಿ ವ್ಯವಹಾರದಿಂದ ಸಾಕಷ್ಟು ಹಣ ಬರುತ್ತದೆ ಎಂದು ತಿಳಿಸಿರುತ್ತಾರೆ ಎಂದು ನಂಬಿಸಿರುತ್ತಾರೆ. ನಂತರ 20 ಲಕ್ಷ ರೂ. ಹಣವನ್ನು ಮಹಮ್ಮದ್ ರಫಿ ರವರಿಗೆ ಕೊಟ್ಟಿದ್ದು, ವಿಜಯ ಕುಮಾರ್ ರವರು 5 ಲಕ್ಷ ಹಣವನ್ನುಮಹಮ್ಮದ್ ರಫಿ ರವರಿಗೆ ಬೆಳಿಗ್ಗೆ ಕೊಟ್ಟಿರುವುದಾಗಿ ತಿಳಿಸಿರುತ್ತಾನೆ. ನಂತರ ಹಣ ಕೊಟ್ಟು ಊರಿಗೆ ವಾಪಾಸ್ಸು ಬಂದಿದ್ದು ನಂತರ ದಿಃ 21/12/2016 ರಂದು ಹೊಸದುರ್ಗಕ್ಕೆ ರೈಸ್ ಪುಲ್ ಪರೀಕ್ಷೆ ಮಾಡುವ ಸಲುವಾಗಿ ಮಹಮ್ಮದ್ ರಫಿ ಆತನ ಸಹಚರರು ಬಂದಿದ್ದು, ಸ್ವಾಮಿಜೀ ರವರು ಹೇಳಿದ ಜಾಗಕ್ಕೆ ರೈಸ್ ಪುಲ್ ಪರೀಕ್ಷೆ ಸಂಬಂದ ಹೋಗುತ್ತಿದ್ದಾಗ ಒಬ್ಬ ವ್ಯಕ್ತಿ ನಂಬರ್ ಪ್ಲೇಟ್ ರಹಿತ ಬೈಕಿನಲ್ಲಿ ಬಂದು ನಮ್ಮನ್ನು ಕರೆದುಕೊಂಡು ಹೋಗಿದ್ದು ಅಲ್ಲಿ ಒಂದು ದೇವಸ್ಥಾನದ ಹತ್ತಿರ ನಮ್ಮನ್ನು ಇಳಿಸಿದರು. ಆಗ ಅವರು ರೈಸ್ ಪುಲ್ ಪರೀಕ್ಕೆ ಮಾಡಲು ಹೋಗುವಾಗ ಆ ಕಾಲಕ್ಕೆ ಮುಮೊಂಟ್ ರಿಜಿಸ್ಟರ್ ಗಳಿಗೆ ನಮ್ಮ ಸಹಿ ಪಡೆದುಕೊಂಡಿರುತ್ತಾರೆ ಹಾಗೂ ಆ ಕಾಲಕ್ಕೆ ಕೆಲವೊಂದು ಖಾಲಿ ಹಾಳೆಗಳಿಗೆ ಮತ್ತು ಛಾಪಾ

ಕಾಗದಗಳಿಗೆ ಸಹಿ ಪಡೆದಿದ್ದು ಅವುಗಳನ್ನು ಭಾರತ ಸರ್ಕಾರದಿಂದ ಅನುಮತಿ ಪಡೆಯುವ ಸಲುವಾಗಿ ಪಡೆದುಕೊಂಡಿರುವುದಾಗಿ ಹೇಳಿರುತ್ತಾರೆ. ಆದಾದ 1 ಗಂಟೆಯ ನಂತರ ಮಹಮ್ಮದ್ ರಫೀರವರು ವಾಪಾಸ್ಸು ಬಂದು ನಮ್ಮನ್ನು ಕಾರಿನಲ್ಲಿ ಹತ್ತಿಸಿಕೊಂಡು ದೊಡ್ಡ ಸ್ವಾಮಿಜೀ ರವರು ನನಗೆ ಕರೆ ಮಾಡಿ ಮಠದ ಹತ್ತಿರ ಹೋಗಿ ನಾವು ರೈಸ್ ಪುಲ್ ವಸ್ತುವನ್ನು ಹಿಂದಿನಿಂದ ತರುತ್ತೇವೆ ಸದರಿ ರೈಸ್ ಪುಲ್ ವಸ್ತುವಿನ ಬೆಲೆಯನ್ನು ಅಲ್ಲಿಯೇ ಮಾತನಾಡೋಣ ಎಂದು ಹೇಳಿರುತ್ತಾರೆ. ನಾವು ಕಂಪನಿಯ ಕಾರಿನಲ್ಲಿ ಕುಳಿತು 200 ಅಡಿ ದೂರಕ್ಕೆ ಹೋಗುತ್ತಿರುವಾಗ ಸ್ವಾಮಿಜೀ ಕಡೆಯವರ ಜನರು ಎಂದು ಹೇಳಿಕೊಂಡು 5-10 ಜನ ಕಾರಿನಲ್ಲಿ ಮತ್ತು ಬೈಕಿನಲ್ಲಿ ಬಂದು ನಮ್ಮನ್ನು ಅಡ್ಡಗಟ್ಟಿ ಬೆದರಿಸಿ, ನನಗೆ ಹಲ್ಲೆ ಮಾಡಿರುತ್ತಾರೆ ಹಾಗೂ ಕಾರಿನ ಹಿಂಭಾಗದ ಗ್ಲಾಸನ್ನು ಒಡೆದಿರುತ್ತಾರೆ. ಆಗ ನಾವು ಜೀವ ಉಳಿದರೇ ಸಾಕು ಎಂದು ಕಾರಿನಲ್ಲಿ ಹತ್ತಿಕೊಂಡಿದ್ದು ನಮ್ಮನುನ ಬಸ್ ಸ್ಟ್ಯಾಂಡ್ ಗೆ ಕರೆದುಕೊಂಡು ಬಂದಿರುತ್ತಾರೆ.

17. ನಮ್ಮನ್ನು ಬಸ್ ಸ್ಟ್ಯಾಂಡಿನಲ್ಲಿ ಇಳಿಸಿ ಮಹಮ್ಮದ್ ರಫಿ ಮತ್ತು ಆತನ ಸಹಚರರು ನಿಮ್ಮ ಹಣ ನಿಮಗೆ ವಾಪಾಸ್ಸು ಸಿಗುವುದಿಲ್ಲ ಹಾಗೂ ನೀವು ಮತ್ತು ಸ್ವಾಮಿಜೀ ರವರು ಸೇರಿಕೊಂಡು ನಮಗೆ ಹೊಡೆಯಲು ಪ್ರಯತ್ನ ಮಾಡಿರುತ್ತೀರಿ ಎಂದು ಹೇಳಿ ಹಾಗೂ ನೀವು ಕಟ್ಟಿದ ಹಣ ವಾಪಾಸ್ಸು ಕೊಡುವುದಿಲ್ಲ ಎಂದು ಹೇಳಿ ಅಲ್ಲಿಂದ ಪರಾರಿಯಾಗಿರುತ್ತಾರೆ. ಆಗ ನಾನು ದೊಡ್ಡ ಸ್ವಾಮಿಜೀ ರವರಿಗೆ ಪೋನ್ ಮಾಡಿದರೂ ಸಹ ಅವರು ರೆಸ್ಪಾನ್ಸ್ ಮಾಡಿರುವುದಿಲ್ಲ ಮತ್ತು ಮಹಮ್ಮದ್ ರಫಿ ರವರು ಸಹ ನಮಗೆ ರೆಸ್ಪಾನ್ಸ್ ಮಾಡಿರುವುದಿಲ್ಲ. 3 ದಿನಗಳ ನಂತರ ಸ್ವಾಮಿಜೀ ಎಂದು ದೂರವಾಣಿ ಮುಖಾಂತರ ಹೇಳಿಕೊಳ್ಳುವ ವ್ಯಕ್ತಿ ಕಡೆಯವರು ನೀವೇನಾದರೂ ಪೊಲೀಸರಿಗೆ ನಮ್ಮ ವಿರುದ್ಧ ದೂರು ಕೊಟ್ಟರೇ ಅಥವಾ ಮಠದ ಬಳಿ ಬಂದು ಗಲಾಟೆ ಮಾಡಿದರೆ ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿರುತ್ತಾರೆ.

18. ನಂತರ ನನಗೆ ಅನಾರೋಗ್ಯ ಆಗಿ ಅಪೆಂಡಿಕ್ಸ್ ಆಗಿದ್ದು ನಂತರ ನಾನು ಈ ರೀತಿ ನನಗೆ ಮೋಸ ಮಾಡಿದ ಸಂಬಂದ ದೂರನ್ನು ಕೊಟ್ಟಿರುತ್ತೇನೆ. ನಾನು ಎನ್ ಆರ್ ಪುರ ಪೊಲೀಸ್ ಠಾಣೆಗೆ ಹೋಗಿ ದೂರು ಕೊಡಲು ಹೋದಾಗ ಅವರು ಸ್ವೀಕರಿಸದೇ ಇದ್ದ ಕಾರಣ ನಾನು ಪೊಲೀಸ್ ವರಿಷ್ಠಾಧಿಕಾರಿ, ಚಿಕ್ಕಮಗಳೂರು ಇವರಿಗೆ ದೂರು ಕೊಡಲು ಹೋದಾಗ ಅವರು ಅದನ್ನು ಸ್ವೀಕರಿಸಿ ಎನ್ ಆರ್ ಪುರ ಪೊಲೀಸರಿಗೆ ಕಳುಹಿಸಿರುತ್ತಾರೆ. ದಿ: 24/03/2017 ರಂದು ಸಂಜೆ 4.00 ಗಂಟೆಗೆ ದೂರು ದಾಖಲಿಸಿಕೊಂಡಿರುತ್ತಾರೆ. ನಾನು ಜಮೀನಿನ ಬಳಿ ಹೋದಾಗ ಅಕ್ಕ-ಪಕ್ಕದ

ಜಮೀನಿನವರು ನಂದನ್ (2 ನೇ ಆರೋಪಿ) ರವರು ಸಾಕಷ್ಟು ಜನರಿಗೆ ಈ ರೀತಿ ಮಾಡಿರುತ್ತಾರೆ. ನೀವೂ ಸಹ ಈ ರೀತಿ ಮೋಸ ಹೋಗಿರುತ್ತೀರಿ ಎಂದು ಹೇಳಿರುತ್ತಾರೆ.

(ಈ ಹಂತದಲ್ಲಿ ಮುಂದುವರಿದ ಮುಖ್ಯವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಲಾಯ್ತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ